ಕೆನ್ನೆಗಳ ಮೇಲೆ ಒಂದೆರಡು ತೊಟ್ಟು ಕಣ್ಣೀರು ನಿಧಾನವಾಗಿ ಉರುಳುತ್ತಿತ್ತು.

ರಾಮಚಂದ್ರ, ಅವರ ಕಣ್ಣುಗಳ ಮೇಲಿದ್ದ ಕನ್ನಡಕ ತೆಗೆದು ಅವನ ಜೇಬಿನಲ್ಲಿದ್ದ ಕರಚೌಕ ತೆಗೆದುಕೊಂಡು ಕಣ್ಣೀರನ್ನು ಒರಸಿದ. ಅತ್ತೆ ಶಾರದಾ ಮ್ಯಾಡಮ್ ಕಣ್ಣುಗಳಿಗೆ ಕಪ್ಪು ಕನ್ನಡ ಹಾಕಿಕೊಂಡಿದ್ದರು. ಬಹುಶಃ ಕಣ್ಣುಗಳಿಗೆ ಏನಾದರು ತೊಂದರೆ ಆಗಿತ್ತೊ ಏನೊ? ಗೊತ್ತಾಗಲಿಲ್ಲ. ಅವರ ಕಣ್ಣುಗಳಲ್ಲೂ ಕಣ್ಣೀರು ಬರುತ್ತಿತ್ತು. ಈಗ ರಾಮಚಂದ್ರ ಮತ್ತು ಜ್ಯೋತಿ ಇಬ್ಬರೂ ನನ್ನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಿದರು. ಅವರು ತಂದಿದ್ದ ಹೂವಿನ ಹಾರಗಳನ್ನು ನನ್ನ ಎದೆಯ ಮೇಲೆ ಹಾಕಿದರು. ಈಗಾಗಲೇ ನನ್ನ ಎದೆಯ ಮೇಲೆ ಭಾರ ತಾಳಲಾರದಷ್ಟು ತೂಕದ ಹೂವಿನ ಹಾರಗಳು ಬಿದ್ದಿದ್ದವು. ನನ್ನ ಸಹೋದ್ಯೋಗಿಗಳು ಎಲ್ಲರೂ ಸೇರಿ ಒಂದು ದೊಡ್ಡ ಹಾರವನ್ನು ನನ್ನ ಎದೆಯ ಮೇಲೆ ಇಟ್ಟು ಒಬ್ಬೊಬ್ಬರಾಗಿ ನನ್ನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡಿ ಪಕ್ಕಕ್ಕೆ ಸರಿದು ನಿಂತುಕೊಂಡರು. ಬದುಕು ನಿಜವಾಗಿಯೂ ಒಂದು ನಾಟಕ ರಂಗವೇ ಸರಿ. ನಾವು ತಿಳಿದುಕೊಂಡಂತೆ ಅದು ನಡೆಯುವುದೇ ಇಲ್ಲ. ಎಲ್ಲವೂ ವಿಧಿ ಎನ್ನುವುದು ಇದೇ ಕಾರಣಕ್ಕೆ.

ನಾನು ಎಲ್ಲರ ಕಡೆಗೂ ನೋಡುತ್ತ, ಎಲ್ಲರೂ ಏನೇನು ಮಾತನಾಡುತ್ತಾರೆ ಎಂಬುದನ್ನು ಕಿವಿಕೊಟ್ಟು ಕೇಳುತ್ತಿದ್ದೇನೆ. ಏಕೆಂದರೆ ಈ ಭೂಮಿಯ ಮೇಲೆ ಇದು, ನನ್ನ ಕೊನೆ ದಿನ ಇರಬೇಕು? ನಾನು ಕುಳಿತಿರುವ ನುಗ್ಗೆ ಮರದ ಕೆಳಗೆ ಇಬ್ಬರು ನಿಂತಿದ್ದಾರೆ. ಅವರು ಮಾತನಾಡುತ್ತಿದ್ದ ಮಾತುಗಳು ನನಗೆ ಕೇಳಿಸಿ ಅವರ ಕಡೆಗೆ ದಿಢೀರನೆ ಬಗ್ಗಿ ನೋಡಿದೆ. ಅವರಿಬ್ಬರು ಹತ್ತಿರವೇ ನಿಂತಿರುವ ನಾರಾಯಣನಿಗೆ ಎಚ್ಚರಿಕೆ ನೀಡುವಂತೆ ಹೇಳುತ್ತಿದ್ದಾರೆ. `ಹುಷಾರ್ ಎಲ್ಲಿಯಾದರು ಉಸಿರು ಬಿಟ್ಟೀಯ. ಬಿಟ್ಟರೆ ನೀನು, ನಿನ್ನ ಪತ್ನಿ ಮಕ್ಕಳು ಅನ್ಯಾಯವಾಗಿ ಸತ್ತು ಹೋಗ್ತಾರೆ' ಎನ್ನುವ ಮಾತುಗಳು ನನ್ನ ಕಿವಿಗೆ ಬಿದ್ದು ಗಲಿಬಿಲಿಗೊಂಡು ಅವರ ಕಡೆಗೆ ಮತ್ತೆ ನನ್ನ ಕಣ್ಣುಗಳನ್ನು ನೆಟ್ಟೆ. ಯಾರಿವರು? ನಮ್ಮ ಫಾರ್ಮ್ ಹೌಸ್‌ನಲ್ಲಿ ಯಾವಾಗಲೂ ನೋಡಿಲ್ಲವಲ್ಲ? ಮತ್ತೆ ಮತ್ತೆ ಯೋಚಿಸಿ ನೋಡಿದೆ. ಬಹಳ ದಿನಗಳ ಹಿಂದೆ ಫಾರ್ಮ್ ಹೌಸ್‌ನಲ್ಲಿ ಕೆಲವು ದಿನಗಳು ಕೆಲಸ ಮಾಡುತ್ತಿದ್ದ ನಮ್ಮ ಪಕ್ಕದ ಹಳ್ಳಿಯ ಬಾವಿಗಳನ್ನು ತೋಡುವ ವಡ್ಡರ ಹುಡುಗರು. ಅವರ ಮುಖಗಳನ್ನು ನೋಡಿದ್ದೆ ನನಗೆ ನಿಧಾನವಾಗಿ ಏನೇನೊ ಜ್ಞಾಪಕಕ್ಕೆ ಬರತೊಡಗಿತು. ಮಂಪರು ಮಂಪರಾಗಿ... ಕಣ್ಣುಗಳನ್ನು ಮುಚ್ಚಿಕೊಂಡು ನನ್ನ ಜ್ಞಾಪಕ ಶಕ್ತಿಯ ನರಮಂಡಲದಲ್ಲೆಲ್ಲ ಕೈಹಾಕಿ ಹುಡುಕಾಡಿದೆ. ಎಲ್ಲೊ ಏನೊ ಆಳದಲ್ಲಿ ಕೆಳಗೆ ಬಿದ್ದಿದ್ದ ವಿಷಯವನ್ನು ತಡಕಾಡಿ ನೋಡಿದೆ. ನನ್ನ ಕೈಕಾಲುಗಳನ್ನು ಹಿಡಿದುಕೊಂಡು ಮುಖಕ್ಕೆ ತಲೆದಿಂಬನ್ನು ಒತ್ತಿ ಸಾಯಿಸಿದವರು ಇವರೇ ಇರಬೇಕೇನೊ? ನಾರಾಯಣನಿಗೆ ಎಚ್ಚರಿಕೆ ಯಾಕೆ ಕೊಡುತ್ತಿದ್ದಾರೆ? ನಿನ್ನೆ ಸಾಯಂಕಾಲ ನನ್ನ ಫಾರ್ಮ್ ಹೌಸ್‌ನಲ್ಲಿ ಯಾರೂ ಇರಲಿಲ್ಲ. ನಾರಾಯಣ, ನಾರಾಯಣನ ಪತ್ನಿ ಅವರ ಸಂಬಂಧಿಕರ ಊರಿನಲ್ಲಿ ಮದುವೆ ಇದೆ ಎಂದು ಹೋಗಿದ್ದರು. ಸಾಯಂಕಾಲ ಚುಮುಚುಮು ಕತ್ತಲು ಫಾರ್ಮ್ ಹೌಸ್ ಗೇಟ್ ಮುಚ್ಚಿ ಒಬ್ಬನೆ ಫಾರ್ಮ್ ಹೌಸ್‌ನ ಮನೆಯಲ್ಲಿ ಮಂಚದ ಮೇಲೆ ಮಲಗಿಕೊಂಡು ಹಾಗೇ ಕಣ್ಣುಮುಚ್ಚಿದ್ದೆ. ಸಾವಿತ್ರಿ ನನ್ನ ತಮ್ಮನ ಮನೆಗೆ ಹೋಗಿದ್ದಳು.

ಈಗ ನನ್ನ ಸಾವಿನ ಬಗ್ಗೆ ನನ್ನ ಮನಸ್ಸಿನಲ್ಲಿ ಒಂದು ನಿಖರವಾದ ಚಿತ್ರಣ ಮೂಡುವಂತೆ ತೋರುತ್ತಿತ್ತು. ಹಾಗೇ ಕಣ್ಣುಗಳನ್ನು ಮುಚ್ಚಿಕೊಂಡು ಮತ್ತಷ್ಟು ತದೇಕಚಿತ್ತದಿಂದ ಯೋಚಿಸತೊಡಗಿದೆ. ನಾನು ಕಣ್ಣು ಮುಚ್ಚಿ ಮಲಗಿದ್ದಾಗ ಹಠಾತ್ತನೆ ಒಬ್ಬ ನನ್ನ ಮುಖದ ಮೇಲೆ ತಲೆದಿಂಬು ಒತ್ತಿ ಹಿಡಿದುಕೊಂಡಂತಾಯಿತು. ಇನ್ನಿಬ್ಬರು ಎರಡೂ ಕೈಗಳನ್ನು ಆ ಕಡೆಗೆ ಈ ಕಡೆಗೆ ಎಳೆದು ಹಿಡಿದುಕೊಂಡರು. ಮತ್ತೊಬ್ಬ ಎರಡೂ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡಂತಾಯಿತು. ಸುಮಾರು ಹೊತ್ತು ಕಷ್ಟಪಟ್ಟೆ. ಅನಂತರ ಏನಾಯಿತೊ ತಿಳಿಯಲಿಲ್ಲ. ಎಷ್ಟೋ ಹೊತ್ತಿಗೆ ಕತ್ತಲಲ್ಲಿ ನನ್ನ ಆತ್ಮವೊ ಪ್ರೇತಾತ್ಮವೊ ಗೋಡೆಯ ಮೇಲೆ ಕುಳಿತುಕೊಂಡಿತ್ತು. ಮೊದಲು ನಾರಾಯಣ ಒಳಗಡೆ ಬಂದು ನನ್ನನ್ನು ಎಬ್ಬಿಸಿ ನೋಡಿದ. ಊಹು. ಏನೂ ಆಗಲಿಲ್ಲ. ಮೂಗಿನ ಹತ್ತಿರ ಬೆರಳುಗಳನ್ನು ಇಟ್ಟು ನೋಡಿದ. ನನ್ನ ಉಸಿರಾಟ ಯಾವಾಗಲೊ ನಿಂತುಹೋಗಿತ್ತು. ಪಾಪ, ಹಳ್ಳಿಯಲ್ಲಿ ಅವನು ಏನು ಮಾಡಲು ಸಾಧ್ಯವಿತ್ತು? ಬೆಂಗಳೂರಾಗಿದ್ದರೆ ಯಾರಾದರು ವೈದ್ಯರನ್ನು ತುತರ್‌ಾಗಿ ಕರೆಯಬಹುದಿತ್ತು? ಅಂಬ್ಯುಲೆನ್ಸ್‌ಗೆ ಫೋನ್ ಮಾಡಿ ಕರೆಯಬಹುದಿತ್ತು. ಇಲ್ಲ ಯಾರಿಗಾದರೂ ಸಂದೇಹ ಬಂದಿದ್ದರೆ ಪೋಲಿಸರಿಗಾದರು ತಿಳಿಸಬಹುದಿತ್ತು. ಹಳ್ಳಿಯ ಜನರಿಗೆ ಅದ್ಯಾವ ಸೌಕರ್ಯಗಳೂ ಇಲ್ಲವಲ್ಲ.

ಕಾದಂಬರಿಯ ಮೊದಲಿನ ಪ್ಯಾರಾವನ್ನು ಒಮ್ಮೆ ಅವಲೋಕಿಸಿಕೊಳ್ಳಿ... (ಫಾರ್ಮ್‌ಹೌಸ್... ಮನೆಯ ಹೊರಗೆ ಸದ್ದಾಗಿ ಮನೆಯ ಒಳಗಿಂದ ಓಡಿಬಂದ ನಾರಾಯಣ ಸುತ್ತಲೂ ನೋಡಿದ. ಗಿಡಗಳಲ್ಲಿ ಅಡಗಿ ಕುಳಿತ ಯಾರೋ ಹಂತಕರು ಓಡಿ ಹೋದಂತಾಗಿ ಅನುಮಾನ ಬಂದು ಇನ್ನೇನು ಕಿರುಚಾಡಬೇಕು? ಅಷ್ಟರಲ್ಲಿ ಯಾರೋ ಹಿಂದಿನಿಂದ ಬಂದು ನಾರಾಯಣನ ಬಾಯಿಯನ್ನು ಗಟ್ಟಿಯಾಗಿ ಮುಚ್ಚಿ ಹಿಡಿದುಕೊಂಡು `ಮಗನೇ ಬಾಯಿ ತೆಗೆದರೆ ಅವರಿಗಾದ ಗತಿಯೇ ನಿನಗೂ ಆಗುತ್ತದೆ' ಎಂದರು. ನಾರಾಯಣ ಭಯದಿಂದ ಬಾಯಿ ಮುಚ್ಚಿಕೊಂಡು ಹಾಗೇ ಕಣ್ಣುಗಳನ್ನು ಬಿಡುತ್ತಾ ಅವರನ್ನು ನೋಡುತ್ತ ಇದ್ದುಬಿಟ್ಟ. ಮತ್ತೆ, ಆ ಹಂತಕರು `ನೋಡು ನಾರಾಯಣ ಈಗ ಅವರು ಕೊಲೆಯಾಗಿಲ್ಲ. ಹೃದಯಾಘಾತ ಆಗಿದ್ದಾರೆ. ನೀನೇನಾದರು ಬಾಯಿ ಬಿಟ್ಟರೆ ನಿನ್ನ ಮಕ್ಕಳು, ಪತ್ನಿ, ನಿನಗೂ ಇದೇ ಗತಿಯಾಗುತ್ತದೆ ಹುಷಾರ್'. ಎಂದಿದ್ದೆ ಗೋಡೆ ಹಾರಿ ಕತ್ತಲಲ್ಲಿ ಬೆಟ್ಟದ ಕಡೆಗೆ ಓಡಿಹೋದರು).

ಮುಂದಿನದು ನಿಮಗೆಲ್ಲ ಗೊತ್ತಾದ ವಿಷಯವೆ ಆಗಿದೆ. ಆದರೆ ನನ್ನನ್ನು ಪಕ್ಕದ ಊರಿನ ವಡ್ಡರ ಹುಡುಗರು ಸಾಯಿಸಲು ಏನು ಕಾರಣ? ಏನೇನೊ ಯೋಚಿಸಿ ನೋಡಿದೆ. ನನಗೆ ಏನೂ ಹೊಳೆಯಲಿಲ್ಲ. ಈಗ ನನ್ನಿಂದ ಪೊಲೀಸ್ ಠಾಣೆಗೆ ಹೋಗಲೂ ಸಾಧ್ಯವಿಲ್ಲ. ಈಗ ನನಗೆ ಗೊತ್ತಾದರೂ ಪ್ರಯೋಜನ ಏನೂ ಇಲ್ಲ?

***

ಈಗ ಇನ್ನಷ್ಟು ತಂಗಾಳಿ ಬೀಸುತ್ತಿದ್ದು ಸೂರ್ಯನೂ, ತಾನು ಹೊರಟು ಬಿಟ್ಟಿದ್ದೇನೆ ಎಂದು ಪ್ರಪಂಚಕ್ಕೆ ಸಾರುತ್ತಿದ್ದ. ಅದನ್ನು ಅಲ್ಲಿದ್ದವರೊಲ್ಲೊಬ್ಬರು ಗಮನಿಸಿ, `ತೆಗಿಯರಪ್ಪ ಟೈಂ ಆಯಿತು. ಏನು! ಕತ್ತಲಾದ ಮೇಲೆ ಮಸಣಕ್ಕೆ ಹೋಗ್ತೀರೇನು?' ಎಂದಿದ್ದೆ ಸುತ್ತಲಿದ್ದ ಕೆಲವರು ನನ್ನ ಮೇಲಿದ್ದ ಹೂವಿನ ಹಾರಗಳನ್ನೆಲ್ಲ ತೆಗೆದು ಪಕ್ಕಕ್ಕಿಟ್ಟು ನನ್ನನ್ನು ನಾಲ್ಕಾರು ಜನ ಹಾಗೆ ಎತ್ತಿಕೊಳ್ಳಲು ಕೈಗಳನ್ನು ಹಾಕಿದ್ದೆ ಮಹಿಳೆಯರೆಲ್ಲ ಕೂಗಾಡಲು ಶುರು ಮಾಡಿಬಿಟ್ಟರು. ಅವರ ಕೆಲಸ ಅವರದು, ಇವರ ಕೆಲಸ ಇವರದು ಎಂಬಂತೆ ನನ್ನ ಮೇಲಿದ್ದ ಬಟ್ಟೆಗಳನ್ನು ಬಿಚ್ಚಿ ಬಿಸಿನೀರಿನ ಸ್ನಾನ ಮಾಡಿ ಚಟ್ಟದ ಮೇಲೆ ನನ್ನನ್ನು ಮಲಗಿಸಿ ಬಿಳಿ ಪಂಚೆಗಳಿಂದ ದೇಹವನ್ನು ಮುಚ್ಚಿ ಕೈಕಾಲುಗಳನ್ನು ಆಗಲೇ ಎಣೆದಿದ್ದ ಭತ್ತದ ಹುಲ್ಲಿನ ಹಗ್ಗಗಳಿಂದ ಕಟ್ಟಿದರು. ಉಳಿದ ಅದೇನೇನೊ ಪದ್ಧತಿಗಳನ್ನ ಮಾಡಿ ಎಲ್ಲ ತಯಾರಾಗಿದೆ ತಾನೇ ಎಂದು ಮಸಣಕ್ಕೆ ಬೇಕಾದ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ದೇವರ ಹೆಸರುಗಳನ್ನು ಕೂಗುತ್ತ ಚಟ್ಟವನ್ನು ಮೇಲಕ್ಕೆ ಎತ್ತಿ ನಾಲ್ಕು ಜನರು ತಮ್ಮ ಭುಜಗಳ ಮೇಲೆ ಹೊತ್ತುಕೊಂಡು ಹೊರಟು ಬಿಟ್ಟರು. ನನ್ನ ತಮ್ಮನ ದೊಡ್ಡ ಮಗ ಕೈಯಲ್ಲಿ ಒಂದು ಸಣ್ಣ ಕುಂಡವನ್ನ ಹಿಡಿದುಕೊಂಡು ನನ್ನ ಮುಂದೆ ಬರೀ ಮೈಯಲ್ಲಿ ನಡೆಯುತ್ತಿದ್ದ. ಉಳಿದ ಕೆಲವರು ನನ್ನ ಮೇಲೆ ಚಿಲ್ಲರೆ ಹಣ, ಎಲೆಗಳು ಮತ್ತು ಕಡಲೆ ಪುರಿಯನ್ನು ಚೆಲ್ಲುತ್ತಾ ಸಾಗಿದ್ದರು. ಈ ನಡುವೆ ನಾನು ಹೇಗೊ ಎದ್ದುಬಿದ್ದು ಕೈಕಾಲುಗಳನ್ನು ಮುರಿದು ಕೊಂಡವನಂತೆ ನನ್ನ ದೇಹವನ್ನು ಸಾಗಿಸುತ್ತಿದ್ದ ಚಟ್ಟದ ಮೇಲೆ ಬಿದ್ದು ಅದರ ಮೇಲೆಯೇ ಸವಾರಿ ಮಾಡುತ್ತಿದ್ದೆ. ನಾನೀಗ ಒಂದು ಕಾಗೆಯ ರೂಪವನ್ನು ಪಡೆದುಕೊಂಡಂತೆ ತೋರುತ್ತಿತ್ತು. ಆದರೆ ಯಾರ ಕಣ್ಣಿಗೂ ಕಾಣಿಸುತ್ತಿರಲಿಲ್ಲ. ಕೆಲವು ನಾಯಿಗಳು ಮಾತ್ರ ನನ್ನನ್ನು ನೋಡಿ ಬೊಗಳುತ್ತಿರುವಂತೆ ಕಾಣಿಸುತ್ತಿತ್ತು. ಬಹುಶಃ ಅವುಗಳ ಕಣ್ಣಿಗೆ ನಾನು ಕಾಣಿಸುತ್ತಿದ್ದೇನೊ ಏನೊ? ಮಹಾಭಾರತದಲ್ಲಿ ಸ್ವರ್ಗದ ಬಾಗಿಲಿಗೆ ಮೊದಲು ತಲುಪಿದ ಧರ್ಮರಾಯನ ಜೊತೆಗೆ ಇದ್ದಿದ್ದು ನಾಯಿ ತಾನೇ?

ನನ್ನ ಅತ್ತೆ ಮಾವ, ಸುಭದ್ರ, ಇನ್ನೂ ಕೆಲವು ಮಹಿಳೆಯರು ಅಲ್ಲೆ ನಿಂತುಕೊಂಡು ನನ್ನ ಕಡೆಗೆ ನೋಡುತ್ತಿದ್ದರು. ನನ್ನ ಸಹೋದ್ಯೋಗಿಗಳು, ರಾಮಚಂದ್ರ, ನನ್ನ ತಮ್ಮ, ತಂಗಿ ಸರೋಜಳ ಕುಟುಂಬ, ನನ್ನ ಕುಟುಂಬ ಹೀಗೆ ಅನೇಕ